

## ಗೋಡೆ ಕಾಣುತ್ತಿಲ್ಲ!

ನಮ್ಮ ವೆಂಕೋಬ ಭಟ್ಟರು ಬಹಳ ಹಾಸ್ಯ ಸ್ವಭಾವದವರು. ಒಮ್ಮೆ ಕಾರ್ಯನಿಮಿತ್ತ ಗೆಳೆಯರೊಂದಿಗೆ ಮಂಗಳೂರಿನಿಂದ ಬೆಂಗಳೂರಿಗೆ ಹೊರಟರು. ಊರು ತಲುಪಿದ ತಕ್ಷಣ ಫೋನ್ ಮಾಡಬೇಕೆಂದು ಹೆಂಡತಿ ತಾಕೀತು ಮಾಡಿದ್ದರು. ಎಷ್ಟು ಹೊತ್ತಾದರೂ ಗಂಡನಿಂದ ಫೋನ್ ಬರದಿರುವುದನ್ನು ನೋಡಿ ತಾವೇ ಫೋನಾಯಿಸಿದರು. 'ಹಲೋ, ನಾನ್ರಿ... ಇಷ್ಟು ಹೊತ್ತಾದರೂ ಯಾಕೆ ಫೋನ್ ಮಾಡಲಿಲ್ಲ. ಬೆಂಗಳೂರು ಮುಟ್ಟಿದ್ರಾ ಹೇಗೆ?' ಭಟ್ಟರಿಗೆ ಸ್ವಲ್ಪ ತಮಾಷೆ ಮಾಡಬೇಕೆನಿಸಿತು. 'ಬಸ್ಸಿನಿಂದ ಈಗ ಇಳಿತಾ ಇದ್ದೀನಿ. ಬೆಂಗಳೂರು ಏನೋ ಬಂತು. ಮುಟ್ಟಿದ್ರ ಅಂತ ಕೇಳ್ತಾ ಇದ್ದೀಯ... ಆದರೆ ಮುಟ್ಟಲಿಕ್ಕೆ ಎಲ್ಲೂ ಗೋಡೆಗಳೇ ಕಾಣುತ್ತಿಲ್ಲ.' ಭಟ್ಟರ ಮಾತಿಗೆ ಅವರ ಹೆಂಡತಿ ತಕ್ಷಣ ಫೋನಿಟ್ಟರು.

**ಶ್ರುತಿ ಎಸ್.**

## ಅಂಗವಿಕಲೆ!

ಅಂದು ಧಾರವಾಡ ಬಸ್ಸು ನಮ್ಮ ಸ್ಟಾಪಿಗೆ ಬಂದಿದ್ದೇ ದಿನ ತುಂಬಿದ ಬಸುರಿಯಂತೆ! ಯಥಾಪ್ರಕಾರ ನನಗೆ ನಿಲ್ಲುವುದೇ ಕಾಯಂ ಎಂದುಕೊಂಡು ಬಸ್ ಏರಿದೆ. ಕೈಯಲ್ಲಿ ನಮ್ಮ ಮಾಮನಿಗಾಗಿ ತಂದಿದ್ದ ಅಮ್ಮನ ಕ್ಲಚಸ್ ಬೇರೆ ಇತ್ತು. ಅಮ್ಮ ಕಾಲು ಮುರಿದುಕೊಂಡಾಗ ನಡೆಯಲು ಆಸರೆಗೆಂದು ಇವುಗಳನ್ನು ತಂದಿದ್ದೆವು. ಈಗ ಮಾಮನೂ ಕಾಲು ಜಾರಿ ಬಿದ್ದು ಫಜೀತಿಗೆ ಒಳಗಾಗಿದ್ದರು. ಕೆಲವೇ ದಿನಗಳ ಮಟ್ಟಿಗೆ ಕ್ಲಚಸ್ ಬೇಕಾಗಿತ್ತು. ಅವ್ವನ ಮನೆಗೆ ಹೋಗಿ ಇಸಿದುಕೊಂಡು ಹೊರಟಿದ್ದೆ. ಬಸ್ ಏರುತ್ತಿದ್ದಂತೆ ನನ್ನ ಕೈಯಲ್ಲಿನ ಕ್ಲಚಸ್ ನೋಡಿದ ಕಂಡಕ್ಟರ್, 'ಏ ಮೇಡಂಗ ಜಾಗಾ ಕೊಡ್ರಿಪಾ ಯಾರರೆ...' ಎಂದು ಹೇಳಿ ನನಗೆ ಜಾಗ ಮಾಡಿ ಕೂಡ್ರಿಸಿದ್ದರು. ನಾನು ಮೊದಲು ಈ ಆದರದಿಂದಾಗಿ ಕಕ್ಕಾವಿಕ್ಕಿಯಾದರೂ 'ಎಲ್ಲಾ ಕ್ಲಚ್ ಮಹಿಮೆ!' ಎಂದುಕೊಂಡು ನಸುನಕ್ಕೆ.



**ಮಾಲತಿ ಮುದಕವಿ**